HOSADIGANTHA / HUBBALLI
होसदिगंता / हुब्बल्लि
29 APR 2019

(1)

ರೈಲ್ವೆ ಆಡಳಿತ ಮಂಡಳಿಯಿಂದ ಮಹತ್ವದ ನಿರ್ಧಾರ

# ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ಕಳ್ಳಾಟಕ್ಕೆ ಬ್ರೇಕ್..?

• ಚಂದ್ರಕಾಂತ ಬಾರಕೇರ

**ಹುಬ್ಬಳ್ಳಿ:**ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿನ ಅನಧಿಕೃತ ಪ್ರವೇಶ, ನಿಯಮ ಬಾಹೀರ ಓಡಾಟ, ಬೇಕಾಬಿಟ್ಟಿ ಸಂಚಾರ, ಕಳ್ಳತನ, ಕಾನೂನು ಬಾಹಿರ ಕೃತ್ಯಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಹುಬ್ಬಳ್ಳಿ ರೈಲ್ವೆ ಆಡಳಿತ ಮಂಡಳಿ ಮಹತ್ವದ ಹೆಜ್ಜೆಯನ್ನಿಟ್ಟಿದೆ.

ಸದಾ ಜನ ಜಂಗುಳಿಯಿಂದ ಗಿಜುಗುಡುವ ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ಕಳ್ಳತನ, ಅನಧಿಕೃತ ಪ್ರವೇಶ, ನಿಯಮ ಬಾಹಿರ ಓಡಾಟ, ಕಳ್ಳತನ ಪ್ರಕರಣಗಳು ಸಾಮಾನ್ಯವಾಗಿದ್ದವು. ಅಲ್ಲದೆ, ವಿವಿಧ ಭಾಗಗಳಿಂದ ನಿಯಮ ಬಾಹೀರ ಪ್ರವೇಶ ಪಡೆಯುವವರ ಹಾಗೂ ನಿರ್ಗಮಿಸುವವರ ಸಂಖ್ಯೆಗೂ ಕಡಿಮೆ ಇರಲಿಲ್ಲ.

ಕೆಲ ಪ್ರಕರಣಗಳಿಂದ ಎಚ್ಚೆತ್ತುಕೊಂಡಿರುವ ಹುಬ್ಬಳ್ಳಿ ರೈಲ್ವೆ ನಿಲ್ದಾಣ ಇದೀಗ ರೈಲ್ವೆ ನಿಲ್ದಾಣದ ಸುತಲು ಅನಧಿಕೃತ ಪ್ರವೇಶಕ್ಕೆ ನಿರ್ಬಂಧ ವಿಧಿಸಿದೆ. ಕಳ್ಳತನ ಪ್ರಕರಣಗಳ ನಿಯಂತ್ರಣಕ್ಕೆ ಹಾಗೂ ಪತ್ತೆಗೆ ಅಗತ್ಯ ಕ್ರಮಗಳನ್ನು ಕೈಗೊಂಡಿದೆ.

ವಿವಿಧ ಉದ್ದೇಶಕ್ಕಾಗಿ ಹುಬ್ಬಳ್ಳಿಯಿಂದ ಅನ್ಯ ರಾಜ್ಯಗಳಿಗೆ ಪ್ರಯಾಣಿಸುವ ಹಾಗೂ ಅನ್ಯ ರಾಜ್ಯಗಳಿಂದ ಹುಬ್ಬಳ್ಳಿಗೆ ಆಗಮಿಸುವ ಪ್ರಯಾಣಿಕರ ಸಂಖ್ಯೆ ದಿನದಿಂದ ದಿನಕ್ಕೆ ವೃದ್ಧಿಯಾಗುತ್ತಾ ಸಾಗಿದಂತೆ ರೈಲ್ವೆ ನಿಲ್ದಾಣದಲ್ಲಿನ ಅಕ್ರಮಗಳ ನಿಯಂತ್ರಣಕ್ಕೆ ಕಡಿವಾಣ ಅಸಾಧ್ಯವಾಗಿತ್ತು. ಬೇರೆ-ಬೇರೆ ಕಡೆಗಳಿಂದ ರೈಲ್ವೆಯಲ್ಲಿ ಪ್ರಯಾಣಿಸುವವರು ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದರು. ಅಲ್ಲದೆ, ರೈಲ್ವೆ ನಿಲುಗಡೆ ಸಂದರ್ಭದಲ್ಲಿ ನಿಧಾನವಾಗುತ್ತಿದ್ದಂತೆ ಕಳ್ಳರು ಕೈಚಳಕ ಪ್ರದರ್ಶಿಸುತ್ತಿದ್ದರು. ಮಕ್ಕಳ ಕಳ್ಳತನ, ಹೆಣ್ಣು ಮಕ್ಕಳ ಕಳ್ಳಸಾಗಾಣಿಕೆ, ಸರಗಳ್ಳತನ ಪ್ರಕರಣಗಳಿಗೆ ಕೊನೆಯೇ ಇಲ್ಲದಂತಾಗಿತ್ತು. ಈಗ ಹುಬ್ಬಳ್ಳಿ ರೈಲ್ವೆ ಆಡಳಿತ ಮಂಡಳಿ ಮಹತ್ವದ ನಿರ್ಧಾರಗಳನ್ನು ಕೈಗೊಂಡಿದೆ.






**ಆರ್‌ಪಿಎಫ್ ನಿಯೋಜನೆ:**ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ಅನಧಿಕೃತ ಪ್ರವೇಶ ಮಾಡುವ ಇರೋ ಕಡೆಗಳಲ್ಲಿ ಆರ್‌ಪಿಎಫ್ ಸಿಬ್ಬಂದಿ ನಿಯೋಜಿಸಲಾಗಿದೆ. ಪ್ರಯಾಣಿಕರನ್ನು ಮುಖ್ಯದ್ವಾರದಮೂಲಕಒಳಬಿಡುವವ್ಯವಸ್ಥೆಕೈಗೊಳ್ಳಲಾಗಿದೆ. ರೈಲ್ವೆ ನಿಲ್ದಾಣದಲ್ಲಿ ನಾಲ್ಕು ಸಿಬ್ಬಂದಿ ಸದಾ ಕಾಲ ಗಸ್ತಿನಲ್ಲಿರುವಂತೆ ವ್ಯವಸ್ಥೆ ಮಾಡಲಾಗಿದೆ. ಎಲ್ಲೆಡೆ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಅವುಗಳ ದೃಶ್ಯಾವಳಿಗಳ ಮೇಲೆ ನಿಗಾವಹಿಸಲಾಗಿದೆ.

ಹುಬ್ಬಳ್ಳಿ ಯಾರ್ಡ್, ಭಾರತೀಯ ಆಹಾರ ನಿಗಮ ಮತ್ತು ರೈಲು ಗಾಡಿ ಸ್ವಚ್ಛಗೊಳಿಸುವ ಪ್ರದೇಶದಲ್ಲಿ ಅನಿರೀಕ್ಷಿತ ಹಾಗೂ ಗುಪ್ತ ತಪಾಸಣೆಗಳನ್ನು ನಡೆಸಲು ಮುಂದಾಗಿದೆ. ಸ್ಟೇಶನ್ ರಸ್ತೆಯಿಂದ ರೈಲ್ವೆ ನಿಲ್ದಾಣಕ್ಕೆ ಬರುವ ಮುಖ್ಯ ಪ್ರವೇಶ ದ್ವಾರವನ್ನು ರೈಲುಗಳ ಸೇವೆ ಇಲ್ಲದಿರುವಾಗ ರಾತ್ರಿ 12 ಗಂಟೆಯಿಂದ ಬೆಳಗ್ಗೆ 4 ಗಂಟೆ ವರೆಗೆ ಮುಚ್ಚಲು ರೈಲ್ವೆ ಆಡಳಿತ ಮಂಡಳಿ ಮುಂದಾಗಿದೆ.

> “ರೈಲ್ವೆ ನಿಲ್ದಾಣದಲ್ಲಿ ನಿಯಮ ಬಾಹೀರ ಓಟಾಟ, ಕಳ್ಳತನಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಬಿಗಿ ಭದ್ರತೆ ಕಲ್ಪಿಸಲಾಗಿದೆ. ಅಲ್ಲದೆ, ಅಗತ್ಯವಿರುವೆಡೆ ಸಿಸಿ ಕ್ಯಾಮಗಾರಗಳನ್ನು ಅಳವಡಿಸಲಾಗಿದ್ದು, ಭದ್ರತಾ ದೃಷ್ಟಿಯಿಂದ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಾಗುತ್ತಿದೆ.
> ■ ರಾಜೇಶ ಮೋಹನ್ ವಿಭಾಗೀಯ ರೈಲ್ವೆ ವ್ಯವಸ್ಥಾಪಕರು.

**ಹೈಅಲರ್ಟ್:** ರೈಲ್ವೆ ನಿಲ್ದಾಣದ ಬಳಿಯ ಪಾರ್ಸಲ ಕಚೇರಿ ಬಳಿ, ನಿಲ್ದಾಣದ ಕಡೆ ಸಾಗುವ ರಸ್ತೆಯಲ್ಲಿ ದಿನದ ಇಪ್ಪತ್ನಾಲ್ಕು ಗಂಟೆ ಆರ್‌ಪಿಫ್ ಸಿಬ್ಬಂದಿ ನಿಯೋಜಿಸಲಾಗಿದೆ. ಮುಖ್ಯ ಧ್ವಾರದಲ್ಲಿ ಆರ್‌ಪಿಎಫ್ ಮತ್ತು ವಾಣಿಜ್ಯ ಸಿಬ್ಬಂದಿ ಅಧಿಕೃತ ಟಿಕೆಟ್ ಹೊಂದಿರುವವರನ್ನು ಮಾತ್ರ ನಿಲ್ದಾಣದೊಳಕ್ಕೆ ಪ್ರವೇಶಿಸುವಂತೆ ನೋಡಿಕೊಳ್ಳುತ್ತಿದ್ದಾರೆ ಅನುಮಾನಾಸ್ಪದ ವ್ಯಕ್ತಿಗಳನ್ನು ಮತ್ತು ಲಗೇಜ್‌ಗಳನ್ನು ತಪಾಸಣೆ ಮಾಡಲಾಗುತ್ತದೆ.

**ನಿರಂತರ ಗಸ್ತು:** ಅನಧಿಕೃತ ಪ್ರವೇಶ ತಡೆಗಟ್ಟಲು ನಿಲ್ದಾಣದ ಎರಡೂ ಕಡೆಗಳಲ್ಲಿ ಸಿಬ್ಬಂದಿ ನಿಯೋಜಿಸಲಾಗಿದ್ದು, ಪ್ರಯಾಣಿಕರಿಗೆ ಅಧಿಕೃತ ನಿರ್ಗಮನ ದ್ವಾರವನ್ನು ಬಳಸಲು ಮಾರ್ಗದರ್ಶನ ನೀಡಲಾಗುತ್ತಿದೆ. ಮಫ್ತಿಯಲ್ಲಿರುವ. ವಿಶೇಷ ಭಧ್ರತಾ ತಂಡಗಳು ಹುಬ್ಬಳ್ಳಿ ರೈಲ್ವೆ ನಿಲ್ದಾಣದ ವ್ಯಾಪ್ತಿಯಲ್ಲಿ ಗಸ್ತು ತಿರುಗುತ್ತಿವೆ. ಪ್ಲಾಟ್ ಫಾರ್ಮ್-1 ಪ್ರವೇಶಿಸುವ ಮುಖ್ಯ ದ್ವಾರದಲ್ಲಿ ಕ್ಯೂ ವ್ಯವಸ್ಥೆ ಮೂಲಕ ಆಗಮನ-ನಿರ್ಗಮನ ಪ್ರತ್ಯೇಕಿಸಲಾಗಿದೆ.

↓
Please see translation on next Page

Scanned by CamScanner

The Hosa Digantha written a positive article about Hubballi Railway Station security has came in action for reducing theft cases.Railway officials taken bellow steps eg. Station security plan has been prepared for Hubballi Station and Steps taken to control crime, All unauthorized entries to station are manned by constable/RPF to Only authorized person, employees of railways are being allowed through those entries, Passengers are allowed only through main entries from Dharwad end and Gadag End are manned continuously with RPF Constables, staff are being deployed continuously for patrolling all platforms, CCTV cameras have been provided are being watched continuously from control, Confidential watch in Hubballi yard, FCI , washing line with surprise checks are being conducted Track patrolling is also being conducted in these area ,Main Entry in to Railway station from Station Road is closed from 00.00 hrs. To 04.00 hrs. During when there are no train services, In front of Parcel Office of station, the road leading to station Portico is cordoned off round the clock with beat staff, Two Armed Guards are ensuring patrolling of Portico and circulating area to instill a sense of security among the passengers and to create deterrence in minds of anti social elements, In the main entrance gate leading to PF No.1, RPF with 01 SO with 2 staff in co-ordination with Commercial staff are ensuring entry of Rail users with proper authority/ticket/pass only, In co-ordination with GRP , random frisking of suspects and their luggage's is being done, Armed Guards are also patrolling inside the station premises (PFs/FOB/Sub Way/Waiting Hall) round the clock, The Rail users after purchase of Authority/Ticket are being systematically directed into the station, Staff are deputed on either side of station to prevent trespassers in to Railway Station and guiding passengers to use authorized exits only, The special wing units in mufti are being deputed for intelligence duties, The entry through main entrance leading to platform no.1 is bifurcated by providing queue manager.

Scanned by CamScanner

विजय कर्नाटक/हुबली
VIJAYA KARNATAKA/HUBLI.
29 APR 2019

(3)

# ವಿಮಾನ, ರೈಲ್ವೆ ನಿಲ್ದಾಣದಲ್ಲಿ ಭದ್ರತೆ ದ್ವಿಗುಣ

**ವಿಕ ಸುದ್ದಿಲೋಕ** ಹುಬ್ಬಳ್ಳಿ

ಶ್ರೀಲಂಕಾದಲ್ಲಿ ನಡೆದ ಸರಣಿ ಬಾಂಬ್ ಸ್ಫೋಟ ಹಾಗೂ ರಾಜ್ಯದಲ್ಲಿ ಉಗ್ರರು ನುಸುಳಿರುವ ಶಂಕೆಯ ಹಿನ್ನೆಲೆ ನಗರದ ವಿಮಾನ ಹಾಗೂ ರೈಲ್ವೆ ನಿಲ್ದಾಣಗಳಲ್ಲಿ ಭದ್ರತೆಯನ್ನು ದ್ವಿಗುಣಗೊಳಿಸಲಾಗಿದೆ.

ಪ್ರಯಾಣಿಕರು ಹಾಗೂ ನಿಲ್ದಾಣಕ್ಕೆ ಹೋಗಿ ಬರುವವರ ಮೇಲೆ ತೀವ್ರ ನಿಗಾವಹಿಸಲಾಗಿದ್ದು, ಶಸ್ತ್ರಸಜ್ಜಿತ ಸಿಬ್ಬಂದಿ ಹೆಚ್ಚಳ ಮಾಡಲಾಗಿದೆ. ಹುಬ್ಬಳ್ಳಿ ರೈಲ್ವೆ ನಿಲ್ದಾಣಕ್ಕೆ ಆಗಮಿಸುವವರ ಹಾಗೂ ಪ್ಲಾಟ್‌ಫಾರ್ಮ್‌ಗೆ ತೆರಳುವವರ ಟಿಕೆಟ್‌ನ್ನು ಆರ್‌ಪಿಎಫ್ ಅಧಿಕಾರಿಗಳು ಕಡ್ಡಾಯವಾಗಿ ಪರಿಶೀಲನೆ ಮಾಡುತ್ತಿದ್ದ ದೃಶ್ಯಗಳು ಭಾನುವಾರ ಕಂಡುಬಂದವು. ರೈಲ್ವೆ ನಿಲ್ದಾಣ ಹಾಗೂ ವಿಮಾನ ನಿಲ್ದಾಣದ ಎದುರು ಅನವಶ್ಯಕವಾಗಿ ನಿಲ್ಲುವ ಜನರನ್ನು ಪೊಲೀಸರು ನಿರಂತರವಾಗಿ ಚದುರಿಸುತ್ತಿದ್ದು, ಗುಂಪುಕಟ್ಟಿ ನಿಲ್ಲದಂತೆ ಖಡಕ್ ಎಚ್ಚರಿಕೆ ನೀಡುತ್ತಿದ್ದಾರೆ.

ಇಷ್ಟು ದಿನ ರೇಲ್ವೆ ಮತ್ತು ವಿಮಾನ ನಿಲ್ದಾಣದಲ್ಲಿ 10-15 ಜನರಷ್ಟಿದ್ದ ಶಸ್ತ್ರ ಸಜ್ಜಿತ ಪೊಲೀಸರ ಸಂಖ್ಯೆ ಭಾನುವಾರ 25ಕ್ಕೆ ಏರಿಸಲಾಗಿದೆ. ನಿಲ್ದಾಣದ ಸುತ್ತಲೂ ಹೆಚ್ಚಿನ ಬ್ಯಾರಿಕೇಡ್ ಅಳವಡಿಸಲಾಗಿದ್ದು, ಭದ್ರತೆಗೆ ಬೇಕಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ರೈಲ್ವೆ ನಿಲ್ದಾಣದ ಆರ್‌ಪಿಎಫ್‌ನ ಎಸ್‌ಐ ಒಬ್ಬರು ತಿಳಿಸಿದ್ದಾರೆ.

ಪುಲ್ವಾಮಾ ದಾಳಿಯಾದ ದಿನದಿಂದಲೇ ಇಲ್ಲಿನ ವಿಮಾನ ನಿಲ್ದಾಣದಲ್ಲಿಯೂ ಭದ್ರತೆಯನ್ನು ಹೆಚ್ಚಿಸಲಾಗಿದೆ.




ಶ್ರೀಲಂಕಾದಲ್ಲಿ ನಡೆದ ಸರಣಿ ಬಾಂಬ್ ಸ್ಫೋಟ ಹಾಗೂ ರಾಜ್ಯದಲ್ಲಿ ಉಗ್ರರು ನುಸುಳಿರುವ ಶಂಕೆಯ ಹಿನ್ನೆಲೆಯಲ್ಲಿ ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ಭದ್ರತೆ ಒದಗಿಸಿರುವುದು.

↓

Please see translation on next Page.

Scanned by CamScanner

4

The Vijaya Karnatka written a positive article about Hubballi Railway Station security has came in action for reducing theft cases.Railway officials taken bellow steps eg. Station security plan has been prepared for Hubballi Station and Steps taken to control crime, All unauthorized entries to station are manned by constable/RPF to Only authorized person, employees of railways are being allowed through those entries, Passengers are allowed only through main entries from Dharwad end and Gadag End are manned continuously with RPF Constables, staff are being deployed continuously for patrolling all platforms, CCTV cameras have been provided are being watched continuously from control, Confidential watch in Hubballi yard, FCI , washing line with surprise checks are being conducted Track patrolling is also being conducted in these area ,Main Entry in to Railway station from Station Road is closed from 00.00 hrs. To 04.00 hrs. During when there are no train services, In front of Parcel Office of station, the road leading to station Portico is cordoned off round the clock with beat staff, Two Armed Guards are ensuring patrolling of Portico and circulating area to instill a sense of security among the passengers and to create deterrence in minds of anti social elements, In the main entrance gate leading to PF No.1, RPF with 01 SO with 2 staff in co-ordination with Commercial staff are ensuring entry of Rail users with proper authority/ticket/pass only, In co-ordination with GRP , random frisking of suspects and their luggage's is being done, Armed Guards are also patrolling inside the station premises (PFs/FOB/Sub Way/Waiting Hall) round the clock, The Rail users after purchase of Authority/Ticket are being systematically directed into the station, Staff are deputed on either side of station to prevent trespassers in to Railway Station and guiding passengers to use authorized exits only, The special wing units in mufti are being deputed for intelligence duties, The entry through main entrance leading to platform no.1 is bifurcated by providing queue manager.

Scanned by CamScanner

(5)

KANNADA PRABHA / HUBBALLI
कन्नड प्रभा / हुब्बल्लि
29 APR 2019

ಶ್ರೀಲಂಕಾ ಬಾಂಬ್ ಸ್ಫೋಟ, ರಾಜ್ಯದಲ್ಲಿ
ಉಗ್ರರ ನುಸುಳಿರುವ ಶಂಕೆ ಹಿನ್ನೆಲೆ

# ಹುಬ್ಬಳ್ಳಿ ರೈಲ್ವೆ, ವಿಮಾನ ನಿಲ್ದಾಣದಲ್ಲಿ ಭದ್ರತೆ ದ್ವಿಗುಣ




ರೈಲ್ವೆ ನಿಲ್ದಾಣದಲ್ಲಿ ಪ್ಲಾಟ್‌ಫಾರಂ ಪ್ರವೇಶಿಸುತ್ತಿರುವವರನ್ನು ಪರಿಶೀಲಿಸುತ್ತಿರುವ ಆರ್‌ಪಿಎಫ್.

Please see translation on next page.

Scanned by CamScanner

The Kannda Prabha written a positive article about Hubballi Railway Station security has came in action for reducing theft cases. Railway officials taken bellow steps e.g. Station security plan has been prepared for Hubballi Station and Steps taken to control crime, All unauthorized entries to station are manned by constable/RPF to Only authorized person, employees of railways are being allowed through those entries, Passengers are allowed only through main entries from Dharwad end and Gadag End are manned continuously with RPF Constables, staff are being deployed continuously for patrolling all platforms, CCTV cameras have been provided are being watched continuously from control, Confidential watch in Hubballi yard, FCI , washing line with surprise checks are being conducted Track patrolling is also being conducted in these area ,Main Entry in to Railway station from Station Road is closed from 00.00 hrs. To 04.00 hrs. During when there are no train services, In front of Parcel Office of station, the road leading to station Portico is cordoned off round the clock with beat staff, Two Armed Guards are ensuring patrolling of Portico and circulating area to instill a sense of security among the passengers and to create deterrence in minds of anti social elements, In the main entrance gate leading to PF No.1, RPF with 01 SO with 2 staff in co-ordination with Commercial staff are ensuring entry of Rail users with proper authority/ticket/pass only, In co-ordination with GRP , random frisking of suspects and their luggage's is being done, Armed Guards are also patrolling inside the station premises (PFs/FOB/Sub Way/Waiting Hall) round the clock, The Rail users after purchase of Authority/Ticket are being systematically directed into the station, Staff are deputed on either side of station to prevent trespassers in to Railway Station and guiding passengers to use authorized exits only, The special wing units in mufti are being deputed for intelligence duties, The entry through main entrance leading to platform no.1 is bifurcated by providing queue manager.

Scanned by CamScanner

प्रजा वाणी / हुबली
PRAJA VANI/HUBLI.
29 APR 2019

7

## ಕ್ರಾಸಿಂಗ್ ವಿಳಂಬದಿಂದ ಸಂಕಷ್ಟ

ಶಿವಮೊಗ್ಗದಿಂದ ಬೆಂಗಳೂರಿಗೆ ಇತ್ತೀಚೆಗೆ ಜನಶತಾಬ್ದಿ ರೈಲು ಗಾಡಿ ಪ್ರಾರಂಭವಾಗಿದೆ. ಕೇವಲ ಐದು ಗಂಟೆಗಳಲ್ಲಿ ಊರು ಸೇರಬಹುದು ಎಂದು ಪ್ರಯಾಣಿಕರು ಸಂತೋಷಪಟ್ಟಿದ್ದಾರೆ. ಆದರೆ ಪ್ರಯಾಣ ಪ್ರಯಾಸವಾಗುತ್ತಿದೆ. ಇದೇ ತಿಂಗಳ 21ರಂದು ಸಂಜೆ 5.30ಕ್ಕೆ ಜನಶತಾಬ್ದಿ ರೈಲುಗಾಡಿಯು ಬೆಂಗಳೂರು ಬಿಟ್ಟು ರಾತ್ರಿ 10.30ಕ್ಕೆ ಶಿವಮೊಗ್ಗ ತಲುಪಬೇಕಾಗಿತ್ತು. ಆದರೆ ಮಧ್ಯದಲ್ಲಿ, ಅಂದರೆ ಬಾಣಸಂದ್ರ-ಕರಡಿ ನಿಲ್ದಾಣಗಳ ಮಧ್ಯೆ ಕ್ರಾಸಿಂಗ್‌ನ ಕಾರಣ ಸುಮಾರು 7 ಗಂಟೆಗೆ ರೈಲುಗಾಡಿಯನ್ನು ನಿಲ್ಲಿಸಲಾಯಿತು. ಪ್ರಯಾಣಿಕರಿಂದ ತುಂಬಿ ತುಳುಕುತ್ತಿದ್ದ ರೈಲು, 8 ಗಂಟೆಯವರೆಗೂ ಕದಲಲಿಲ್ಲ. ಕ್ರಾಸಿಂಗ್‌ನ ಕಾರಣ ಐದು-ಹತ್ತು ನಿಮಿಷಗಳ ವಿಳಂಬ ಸರ್ವೇಸಾಮಾನ್ಯ. ಆದರೆ ಅಂದು ಒಂದು ಗಂಟೆಯವರೆಗೆ ನಿಲ್ಲಿಸಿದ್ದನ್ನು ರೈಲ್ವೆ ಇಲಾಖೆ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು. ಈ ವೇಳೆಯಲ್ಲಿ ಪ್ರಯಾಣಿಕರ ಗೋಳು ಹೇಳತೀರದು. ತಡರಾತ್ರಿ ಶಿವಮೊಗ್ಗ ತಲುಪಿದರೆ, ಮನೆಗೆ ಹೋಗಲು ಆಟೊ ರಿಕ್ಷಾದವರು ಕೇಳಿದಷ್ಟು ಬಾಡಿಗೆ ಕೊಡಬೇಕಾಗುತ್ತದೆ. ಸಮಯ ನಿರ್ವಹಣೆಯ ಬಗ್ಗೆ ರೈಲ್ವೆ ಇಲಾಖೆ ಗಮನ ಕೊಡಬೇಕು.

**ಬಿ.ಎಸ್.ತಿಮ್ಮೋಲಿ**, ಶಿವಮೊಗ್ಗ

Shri B.S.Thimmoli from Shivamogga town written in his letter to Prajavani News paper that Recently South Western Railway introduced Shivamogga Town –KSR Bengaluru Janshatabdi train which is connecting both Cities people each other. On 21 April when he was boarded this train from Bengaluru it was taken crossing purpose 1 hour at Banasandra-Karadi stations. This was delayed train 1 hour to reach Shivamogga. He suggested to Railway officials that reduce crossing time as early as possible it will help passengers to reach their destination. Otherwise Auto's will charge more faire at night time to reach their homes. This will burden to Railway passengers.

Scanned by CamScanner

RAJASTHAN PATRIKA / HUBBALLI
राजस्थान पत्रिका / हुब्बल्लि
29 APR 2019

(8)

# गर्मी की छुट्टियों में रेलवे चलाएगा विशेष रेलगाड़ियां

**पत्रिका न्यूज़ नेटवर्क**
rajasthanpatrika.com

**हुब्बल्ली.** दक्षिण-पश्चिम रेलवे ने गर्मी की छुट्टियों के दौरान यात्रियों की बढ़ती भीड़ को देखते हुए कृष्णराजपुरम तथा कोचूवेली के बीच विशेष ट्रेन चलाने का फैसला लिया है।

रेलवे ने ट्रेन संख्या 06027 कृष्णराजपुरम -कोचूवेली साप्ताहिक एक्सप्रेस विशेष किराए के साथ चलाए जाने का निर्णय किया है। इस नई ट्रेन की सुविधा का लाभ यात्रियों को कृष्णराजपुरम से 29 अप्रेल से 1 जुलाई तक प्राप्त होगा। यह ट्रेन कृष्णराजपुरम से सोमवार दोपहर 2 बजे रवाना होकर कोचूवेली स्टेशन पर सुबह 6 बजे पहुंचेगी। ट्रेन वाइटफील्ड, बंगारपेट, ईरोड, कोयम्बटूर, पालक्कड, त्रिशूर, एर्नाकुलम, कोट्टायम, कायनकूलम तथा कोल्लम स्टेशनों पर रुकेगी।

इसी तरह ट्रेन संख्या 82644 कोचुवेली-कृष्णराजपुरम सुविधा साप्ताहिक एक्सप्रेस रविवार शाम 5 बजे कोचुवेली से रवाना होकर कृष्णराजपुरम स्टेशन पर अगले दिन सुबह 8:45 बजे पहुंचेगी।

नई ट्रेन की सुविधा का लाभ यात्रियों को 28 अप्रेल से 30 जून तक मिलेगा। ट्रेन कोल्लाम, कायनकुलम, कोट्टायम, एर्नाकुलम, त्रिशूर, पालक्कड, कोयमबत्तूर, ईरोड, बंगारपेट, वाइटफील्ड स्टेशनों पर ठहरेगी।

Scanned by CamScanner

KANNADA PRABHA / HUBBALLI
ಕನ್ನಡ ಪ್ರಭ / ಹುಬ್ಬಳ್ಳಿ
29 APR 2019



## ರೈಲ್ವೇ ಪ್ರಯಾಣಿಕರಿಂದ ವಸ್ತುಗಳ ಕಳವಿನ ಬಗ್ಗೆ 1.74 ಲಕ್ಷ ದೂರು!

**ನವದೆಹಲಿ:** ಕಳೆದ 10 ವರ್ಷಗಳಲ್ಲಿ ರೈಲ್ವೇ ಪ್ರಯಾಣಿಕರಿಂದ ಬರೋಬ್ಬರಿ 1.74ಲಕ್ಷ ಕಳ್ಳತನದ ಪ್ರಕರಣಗಳು ದಾಖಲಾಗಿವೆ ಎಂದು ರೈಲ್ವೆ ಸಚಿವಾಲಯ ಮಾಹಿತಿ ನೀಡಿದೆ. 2018ರಲ್ಲಿ ಅತಿ ಹೆಚ್ಚು ಅಂದರೆ 36,584 ಕಳ್ಳತನದ ದೂರುಗಳು ದಾಖಲಾಗಿವೆ. 2017ರಲ್ಲಿ 33152, 2015ರಲ್ಲಿ 19215, 2014ರಲ್ಲಿ 14301, 2013ರಲ್ಲಿ 12261, 2012ರಲ್ಲಿ 9292 ಮತ್ತು 2011ರಲ್ಲಿ 9653 ಕಳ್ಳತನದ ದೂರಿವೆ. 2009ರಿಂದ 2018ರವರೆಗೆ ಕಳ್ಳತನ ಪ್ರಕರಣಗಳ ಸಂಖ್ಯೆ 5 ಪಟ್ಟು ಹೆಚ್ಚಿದೆ ಎಂದು ಆರ್‌ಟಿಐ ಅಡಿ ಸಲ್ಲಿಸಿದ್ದ ಅರ್ಜಿಗೆ ಸಚಿವಾಲಯ ಮಾಹಿತಿ ನೀಡಿದೆ. ಇದೇ ವೇಳೆ ರೈಲಿನಲ್ಲಿ ರಕ್ಷಣೆ ರಾಜ್ಯಗಳಿಗೆ ಸೇರಿದ ವಿಷಯ ಎಂದಿದೆ.

RAJASTHAN PATRIKA / HUBBALLI
राजस्थान पत्रिका / हुब्बल्लि
29 APR 2019

## दो घंटे देरी से चलेगी मिरज-हुब्बल्ली पैसेंजर ट्रेन

पत्रिका न्यूज़ नेटवर्क
rajasthanpatrika.com

हुब्बल्ली. ट्रेन संख्या 51419 मिरज-हुब्बल्ली पैसेंजर ट्रेन 29 अप्रेल से 3 मई तक दो घंटे देरी से चलेगी। रेलवे विभाग की ओर से यह फैसला रायबाग-चिंचली स्टेशनों के बीच हो रहे लाइन ब्लॉक कार्य के चलते लिया गया है।

Scanned by CamScanner

ಡೆಕ್ಕನ್ ಹೆರಾಲ್ಡ್ / ಹುಬ್ಬಳ್ಳಿ
DECCAN HERALD/HUBLI.
29 APR 2019

(10)

# Woman averts fire mishap in train

**UDUPI:** A woman averted a major mishap by alerting the authorities about a fire in an AC bogie of Mangala Express (Train no-12618) travelling between Nizamuddin and Ernakulam, near Bijoor in Udupi district, in the wee hours of Sunday.

The fire was noticed when the train reached Bijoor near Byndoor around 1.20 am. Most of the passengers were asleep when the woman was getting ready to alight at Kundapura station.

Upon noticing the fire, she alerted the railway personnel who doused the fire immediately.

Later, the railway personnel detached the bogie that had caught fire at Senapura Railway Station and attached a new AC bogie at Mangaluru, for the train to proceed to its destination.

No passengers were hurt in the incident. On receiving the news of fire, a medical team was kept ready at the station in case of any emergency. The officials from Goa, Mangaluru and Udupi visited the spot.

Sources said only the glass panes of the windows were damaged as they were broken to get the passengers out. The seats in the coach were also damaged in the fire.

The official said there should be some technical error as the smoke was seen initially near the wheels of the train which later spread towards the AC compartment.

**DH News Service**



**A fire broke out in an AC bogie of Mangala Express (Train No. 12618 - H Nizamuddin to Eranakulam Junction) near Bijoor in Udupi district in the wee hours of Sunday.**

[Same articles]

विजय कर्नाटक/हुबली
VIJAYA KARNATAKA/HUBLI.
29 APR 2019

# ಮಹಿಳೆಯ ಸಮಯಪ್ರಜ್ಞೆ, ತಪ್ಪಿದ ರೈಲು ಬೆಂಕಿ ದುರಂತ

**ವಿಕ ಸುದ್ದಿಲೋಕ** ಬೈಂದೂರು (ಉಡುಪಿ) ಮುಂಬಯಿನಿಂದ . ಎರ್ನಾಕುಲಂಗೆ ತೆರಳುತ್ತಿದ್ದ ಮಂಗಳಾ ಎಕ್ಸ್‌ಪ್ರೆಸ್(12618) ರೈಲಿನಲ್ಲಿ ಆಕಸ್ಮಿಕ ಬೆಂಕಿ ಕಾಣಿಸಿಕೊಂಡು ಕೆಲ ಕಾಲ ಆತಂಕಕ್ಕೆ ಕಾರಣವಾಯಿತು.

ರೈಲಿನ ಬಿ-4 ಎಸಿ ಬೋಗಿಯಲ್ಲಿ, ಎಸಿ ಸಮರ್ಪಕವಾಗಿ ಕಾರ್ಯನಿರ್ವಹಿಸದ ಹಿನ್ನೆಲೆಯಲ್ಲಿ, ಅದನ್ನು ದುರಸ್ತಿ ಪಡಿಸುವಂತೆ ಪ್ರಯಾಣಿಕರೊಬ್ಬರು ರೈಲ್ವೆ ಅಧಿಕಾರಿಗಳ ಗಮನಕ್ಕೆ ತಂದಿದ್ದು, ತಕ್ಷಣ ಆಗಮಿಸಿದ ತಂತ್ರಜ್ಞರು ಅದನ್ನು ದುರಸ್ತಿ ಮಾಡಿ ತೆರಳಿದ್ದರು. ತಡರಾತ್ರಿ 1.20ರ ಸುಮಾರಿಗೆ ರೈಲು ಬಿಜೂರು ರೈಲ್ವೆ ನಿಲ್ದಾಣದಿಂದ ಸ್ವಲ್ಪ ದೂರದಲ್ಲಿರುವ ಕಂಬದಕೋಣೆಯಲ್ಲಿ ತೆರಳುತ್ತಿದ್ದಾಗ ಬೋಗಿಯ ಎಸಿ ಫ್ಯಾನ್‌ನಲ್ಲಿ ಶಾರ್ಟ್ ಸರ್ಕಿಟ್‌ನಿಂದಾಗಿ ಬೆಂಕಿ ಕಾಣಿಸಿಕೊಂಡಿದೆ.

ಕುಂದಾಪುರದಲ್ಲಿ ಇಳಿಯಬೇಕಾಗಿದ್ದ ಮಹಿಳೆಯೊಬ್ಬರು ಅದನ್ನು ಗಮನಿಸಿ, ತಕ್ಷಣ ಇತರ ಪ್ರಯಾಣಿಕರನ್ನು ಎಚ್ಚರಿಸಿ, ರೈಲ್ವೆ ಅಧಿಕಾರಿಗಳ ಗಮನಕ್ಕೆ ತಂದರು. ಹೀಗಾಗಿ ಹೆಚ್ಚಿನ ಅನಾಹುತವಾಗುವುದು ತಪ್ಪಿತು ಎನ್ನಲಾಗಿದೆ. ತಕ್ಷಣ ರೈಲನ್ನು ನಿಲ್ಲಿಸಲಾಗಿದ್ದು, ಸ್ಥಳೀಯರು ತಮ್ಮ ಪಂಪ್ ಸೆಟ್‌ನಿಂದ ನೀರನ್ನು ಹಾಯಿಸಿ ಬೆಂಕಿಯನ್ನು ಹತೋಟಿಗೆ ತರಲು ಯತ್ನಿಸಿದರು.

ಕುಂದಾಪುರ ಹಾಗೂ ಭಟ್ಕಳದಿಂದ ಅಗ್ನಿಶಾಮಕ ದಳ ದವರು ಆಗಮಿಸಿದ್ದರು. ಬಳಿಕ ಮತ್ತೊಂದು ರೈಲು ಆಗಮಿಸುತ್ತಿದ್ದ ಹಿನ್ನೆಲೆಯಲ್ಲಿ, ರೈಲನ್ನು ಹಿಮ್ಮುಖವಾಗಿ ತಂದು ಬಿಜೂರು ರೈಲ್ವೆ ನಿಲ್ದಾಣದಲ್ಲಿ ನಿಲ್ಲಿಸಲಾಯಿತು.

Scanned by CamScanner

UDAYAVANI / HUBBALLI
उदयवाणी / हुब्बल्लि
29 APR 2019



# ಮಂಗಳ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಕಿ

## ಸಮಯಪ್ರಜ್ಞೆ ಮೆರೆದ ಮಹಿಳೆ, ತಪ್ಪಿದ ಭಾರೀ ಅನಾಹುತ

ಕುಂದಾಪುರ: ದಿಲ್ಲಿಯ ನಿಜಾಮುದ್ದೀನ್‌ನಿಂದ ಕೇರಳದ ಎರ್ನಾಕುಲಂಗೆ ತೆರಳುತ್ತಿದ್ದ ಮಂಗಳ ಎಕ್ಸ್‌ಪ್ರೆಸ್ ರೈಲಿನ ಎಸಿ ಕೋಚ್‌ನಲ್ಲಿ ಶನಿವಾರ ತಡರಾತ್ರಿ ಬೆಂಕಿ ಕಾಣಿಸಿಕೊಂಡು ಭೀತಿ ಸೃಷ್ಟಿಯಾಯಿತು. ಆದರೆ, ಅದೇ ಬೋಗಿಯಲ್ಲಿದ್ದ ಮಹಿಳೆಯೊಬ್ಬರ ಸಮಯ ಪ್ರಜ್ಞೆಯಿಂದ ಸಂಭಾವ್ಯ ಭಾರೀ ಅನಾಹುತ ತಪ್ಪಿತು.

ಈ ರೈಲು ತಡರಾತ್ರಿ 1.20ರ ವೇಳೆಗೆ ಬೈಂದೂರು ದಾಟಿ ಖಂಬದಕೋಣೆ ಕಬ್ಬಿನಗದ್ದೆ ಬಳಿ ತಲುಪುವಾಗ ಎಸಿ ಕೋಚ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತು. ಎಲ್ಲ ಪ್ರಯಾಣಿಕರು ಗಾಢ ನಿದ್ದೆಯಲ್ಲಿದ್ದುದರಿಂದ ಆರಂಭದಲ್ಲಿ ಬೆಂಕಿ ಹೊತ್ತಿಕೊಂಡಿರುವುದು ಯಾರ ಗಮನಕ್ಕೂ ಬಂದಿರಲಿಲ್ಲ. ಮುಂದೆ ಕುಂದಾಪುರ ನಿಲ್ದಾಣದಲ್ಲಿ ಇಳಿಯಬೇಕಿದ್ದ ಮಹಿಳೆಯೊಬ್ಬರು ಎಚ್ಚರವಾದಾಗ ಬೋಗಿಯಲ್ಲಿ ಬೆಂಕಿ ಕಂಡು ಗಾಬರಿಯಾದರು. ತಕ್ಷಣ ಜಾಗೃತರಾದ ಆಕೆ, ರೈಲಿನ ಸಿಬ್ಬಂದಿಯ ಗಮನಕ್ಕೆ ಇದನ್ನು ತಂದರು. ಕೂಡಲೇ ರೈಲನ್ನು ಬೈಂದೂರು ತಾಲೂಕಿನ ಸೇನಾಪುರ ಮತ್ತು ಬಿಜೂರು ಗ್ರಾಮದ ಮಧ್ಯೆ ನಿಲ್ಲಿಸಿ ಬೆಂಕಿ ನಂದಿಸಲಾಯಿತು.

ಅಗ್ನಿಶಾಮಕ ದಳಕ್ಕೆ ಮಾಹಿತಿ ರವಾನಿಸಿದ್ದರೂ ಅವರು ಬರುವುದರೊಳಗೆ ಸ್ಥಳೀಯರೇ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಎಸಿ ಗ್ಲಾಸ್ ಒಡೆಯುವಾಗ ಸಂಭವಿಸಿದ ಸಣ್ಣಪುಟ್ಟ ಗಾಯ ಹೊರತುಪಡಿಸಿ ಎಲ್ಲ ಪ್ರಯಾಣಿಕರೂ ಕ್ಷೇಮವಾಗಿದ್ದಾರೆ. ಒಬ್ಬ ಮಹಿಳೆಗೆ ಸಣ್ಣಮಟ್ಟಿಗೆ ರಕ್ತದೊತ್ತಡ ಸಮಸ್ಯೆ ಕಾಣಿಸಿಕೊಂಡಿತಾದರೂ ಕೂಡಲೇ ಚೇತರಿಸಿಕೊಂಡ ಕಾರಣ ಪ್ರಯಾಣ ಮುಂದುವರಿಸಿದರು. ರೈಲಿನಲ್ಲಿ ನೂರಾರು ಪ್ರಯಾಣಿಕರಿದ್ದರು.



ಬೆಂಕಿ ಅವಘಡದಲ್ಲಿ ಸುಟ್ಟು ಹೋದ ವಸ್ತುಗಳು.

ಬೆಂಕಿ ಹತ್ತಿದ ಬಿ4 ಬೋಗಿ ಭಾಗಶಃ ಸುಟ್ಟು ಹೋಗಿದೆ. ರೈಲನ್ನು ಮರಳಿ ಬಿಜೂರು ನಿಲ್ದಾಣಕ್ಕೆ ತಂದು ಪ್ರತ್ಯೇಕಿಸಿ, ಪ್ರಯಾಣಿಕರಿಗೆ ಬದಲಿ ವ್ಯವಸ್ಥೆ ಮಾಡಿ ಬೆಳಗಿನ ಜಾವ 5ರ ವೇಳೆಗೆ ರೈಲನ್ನು ಮುಂದಕ್ಕೆ ಕಳುಹಿಸಲಾಯಿತು. ಪ್ರಯಾಣಿಕರು ಸುರಕ್ಷಿತವಾಗಿ ಎರ್ನಾಕುಲಂ ತಲುಪಿದ್ದಾರೆ. ಎಸಿ ಬೋಗಿಯಲ್ಲಿ ಶಾರ್ಟ್ ಸರ್ಕ್ಯೂಟ್ ಆದುದು ಈ ದುರ್ಘಟನೆಗೆ ಕಾರಣ ಎನ್ನಲಾಗಿದೆ.

ಕೊಂಕಣ ರೈಲ್ವೆಯ ಇತಿಹಾಸದಲ್ಲಿ ಇಂತಹ ಬೆಂಕಿ ದುರ್ಘಟನೆ ಇದೇ ಪ್ರಥಮ ಎನ್ನಲಾಗಿದ್ದು ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಸಂಯುಕ್ತ ಕರ್ನಾಟಕ / ಹುಬ್ಬಳ್ಳಿ
SAMYUKTHA KARNATAKA/HUBLI. 29 APR 2019

# ರೈಲಿಗೆ ಬೆಂಕಿ: ಪ್ರಯಾಣಿಕರು ಪಾರು

ಬೆಂಗಳೂರು: ಮಹಿಳಾ ಪ್ರಯಾಣಿಕರ ಸಕಾಲಿಕ ಎಚ್ಚರಿಕೆಯ ಪರಿಣಾಮವಾಗಿ ಉಡುಪಿ ಜಿಲ್ಲೆಯ ಬೈಂದೂರು ಬಳಿಯ ಕಂಬದಕೋಣೆ ಬೃಹತ್ ಪ್ರಮಾಣದ ರೈಲು ದುರಂತ ಜರುಗುವುದು ತಪ್ಪಿರುವ ಘಟನೆ ವರದಿಯಾಗಿದೆ. ಎರ್ನಾಕುಲಂ ನವದೆಹಲಿ ನಡುವಿನ ನಿಜಾಮುದ್ದೀನ್ ಎಕ್ಸ್‌ಪ್ರೆಸ್ ರೈಲಿನ ಎಸಿ ಬೋಗಿಗೆ ಶನಿವಾರ ಮಧ್ಯರಾತ್ರಿಯ ಹೊತ್ತಿಗೆ ಬೆಂಕಿ ಕಾಣಿಸಿಕೊಂಡಿದೆ. ಆಗ ಇಡೀ ರೈಲಿನ ಪ್ರಯಾಣಿಕರು ಗಾಢ ನಿದ್ರೆಯಲ್ಲಿದ್ದರು. ಇಂತಹ ಸನ್ನಿವೇಶದಲ್ಲಿ ಮಹಿಳಾ ಪ್ರಯಾಣಿಕರೊಬ್ಬರು ಬೋಗಿಯಿಂದ ದಟ್ಟವಾದ ಹೊಗೆ ಬರುತ್ತಿರುವುದನ್ನು ಗಮನಿಸಿ ಪರೀಕ್ಷಿಸಿದಾಗ ಬೆಂಕಿ ತಗುಲಿರುವುದು ಗೊತ್ತಾಯಿತು. ಕೂಡಲೇ ನಿದ್ದೆಯಲ್ಲಿದ್ದ ಸಹ ಪ್ರಯಾಣಿಕರನ್ನು ಎಬ್ಬಿಸಿ ದುರಂತ ಸಂಭವಿಸುವ ದಾರುಣ ಸನ್ನಿವೇಶವನ್ನು ವಿವರಿಸಿದರು. ಪ್ರಯಾಣಿಕರು ಕೂಡಲೇ ರೈಲ್ವೆ ಸಿಬ್ಬಂದಿ ಹಾಗೂ ಚಾಲಕನಿಗೆ ಬೋಗಿಗೆ ಬೆಂಕಿ ತಗುಲಿರುವ ವಿಚಾರವನ್ನು ಮುಟ್ಟಿಸಿದರು. ಇದಾದ ಕೆಲವೇ ಹೊತ್ತಿಗೆ ರೈಲು ನಿಂತಿತು. ಕೂಡಲೇ ಎಸಿ ಬೋಗಿಯಲ್ಲಿದ್ದ ಪ್ರಯಾಣಿಕರನ್ನು ಬೇರೆಬೋಗಿಗಳಿಗೆ ಸ್ಥಳಾಂತರಿಸಲಾಯಿತು. ಈ ಗಡಿಬಿಡಿಯ ವಾತಾವರಣದಲ್ಲಿ ಪ್ರಯಾಣಿಕರ ಆಕ್ರಂದನ ಕಂಡು ರೈಲ್ವೆ ಸಿಬ್ಬಂದಿ ಗಲಿಬಿಲಿಗೆ ಒಳಗಾದರು. ಪ್ರಯಾಣಿಕರನ್ನು ಶರವೇಗದಲ್ಲಿ ಬೇರೆ ಬೋಗಿಗೆ ಸ್ಥಳಾಂತರಿಸಿದ ಕೆಲವೇ ನಿಮಿಷಗಳಲ್ಲಿ ಎಸಿ ಬೋಗಿ ಪ್ರಯಾಣಿಕರ ಕಣ್ಣೆದುರಿನಲ್ಲಿಯೇ ಸುಟ್ಟು ಭಸ್ಮವಾಯಿತು. ಆಗ ಬೆಂಕಿಯ ಕೆನ್ನಾಲಿಗೆಯನ್ನು ದೂರದ ಊರಿನ ಜನ ಗಮನಿಸಿ ಏನೋ ಜರುಗಿದೆ ಎಂದು ಧಾವಿಸಿ ಬಂದರು. ಬೈಂದೂರು ರೈಲ್ವೆ ನಿಲ್ದಾಣದಲ್ಲಿ ಈ ಬೆಂಕಿ ದುರಂತವನ್ನು ನೋಡಲು ಅಸಂಖ್ಯ ಜನ ಓಡೋಡಿ ಬಂದರು. ಈ ಘಟನೆಯ ನಂತರ ಭಾರೀ ದುರಂತವನ್ನು ತಪ್ಪಿಸಿದ ಮಹಿಳೆಗೆ ಸಹರೈಲ್ವೆ ಪ್ರಯಾಣಿಕರು ಕೃತಜ್ಞತಾ ಭಾವದಿಂದ ಧನ್ಯವಾದ ಅರ್ಪಿಸಿದರು.

ರೈಲ್ವೆ ಸಿಬ್ಬಂದಿಯೂ ಕೂಡಾ ಮಹಿಳೆ ನೀಡಿದ ಸಕಾಲಿಕ ಎಚ್ಚರಿಕೆಯಿಂದ ಗಂಡಾಂತರ ತಪ್ಪಿತು ಎಂದು ನಿಟ್ಟುಸಿರು ಬಿಟ್ಟರು.

ಶುಕ್ರವಾರವೂ ಕೂಡಾ ಕೆಜಿಎಫ್ ಮಾರ್ಗವಾಗಿ ಬೆಂಗಳೂರಿಗೆ ಬರುತ್ತಿದ್ದ ರೈಲಿಗೂ ಕೂಡಾ ಬೆಂಕಿಕಾಣಿಸಿಕೊಂಡಿತ್ತು. ಆದರೆ ಚಾಲಕನ ಎಚ್ಚರಿಕೆಯಿಂದಾಗಿ ಯಾವುದೇ ರೀತಿಯ ದುರ್ಘಟನೆ ಜರುಗಲಿಲ್ಲ.

[Same as Page No. 10]

Scanned by CamScanner

विजय कर्नाटक/हुबली
VIJAYA KARNATAKA/HUBLI
29 APR 2019



# ಗೂಗಲ್ ಪೇನಲ್ಲೇ ರೈಲು ಟಿಕೆಟ್ ಬುಕ್

■ ಮಲ್ಲಿಕಾರ್ಜುನ ತಿಪ್ಪಾರ್




## ಮೊದಲು ಹೀಗೆ ಮಾಡಿ

- ಹೊಚ್ಚಹೊಸ ಆವೃತ್ತಿಯ ಗೂಗಲ್ ಪೇ ಆ್ಯಪ್ ಇರಲಿ
- ಸ್ಮಾರ್ಟ್‌ಫೋನ್‌ಗೆ ಗೂಗಲ್ ಪೇ ಕಾನ್ಫಿಗರ್ ಆಗಿರಬೇಕು

ಗೂಗಲ್‌ನ ಯುಪಿಐ ಪೇಮೆಂಟ್ ಆ್ಯಪ್ ಗೂಗಲ್ ಪೇ(ಈ ಮೊದಲು ತೇಜ್ ಆ್ಯಪ್ ಎಂದು ಕರೆಯಲಾಗುತ್ತಿತ್ತು) ಬಳಕೆದಾರರಿಗೆ ಹಣವನ್ನು ನೇರವಾಗಿ ಸಂದಾಯ ಮಾಡಲು ಇಲ್ಲವೇ ಪಡೆಯಲು ಅವಕಾಶ ಕಲ್ಪಿಸುತ್ತದೆ. ಜತೆಗೆ, ಕ್ಯಾಬ್‌ನಂಥ ಸೇವಾ ಪೇಮೆಂಟ್‌ಗಳಿಗೂ ನೆರವಾಗುತ್ತದೆ. ಇದೀಗ ಗೂಗಲ್ ಪೇ ಆ್ಯಪ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದು, ನೀವು ರೈಲು ಟಿಕೆಟ್ ಬುಕ್ಕಿಂಗ್ ಕೂಡ ಈ ಆ್ಯಪ್‌ನಲ್ಲೇ ಮಾಡಬಹುದು. ಈಗಾಗಲೇ ಈ ಸಂಬಂಧ ಗೂಗಲ್ ಪೇ ಆ್ಯಪ್ ಭಾರತೀಯ ರೇಲ್ವೆ ಇಲಾಖೆಯ, ಇಂಡಿಯನ್ ಕೆಟರಿಂಗ್ ಮತ್ತು ಟೂರಿಸಮ್ ಕಾರ್ಪೊರೇಷನ್ (ಐಆರ್‌ಸಿಟಿಸಿ) ಜತೆ ಒಪ್ಪಂದ ಮಾಡಿಕೊಂಡಿದೆ. ಹೀಗಾಗಿ, ಐಆರ್‌ಸಿಟಿಸಿ ಮಾತ್ರವಲ್ಲದೇ ಗೂಗಲ್ ಪೇ ಆ್ಯಪ್‌ನಲ್ಲೂ ಟ್ರೈನ್ ಟಿಕೆಟ್ ಬುಕ್ ಮಾಡವುದು ಸೇರಿದಂತೆ ಇನ್ನಿತರ ಮಾಹಿತಿ ಪಡೆಯಬಹುದಾಗಿದೆ. ಬಳಕೆದಾರರು ಆ್ಯಪ್ ಮೂಲಕವೇ ಟ್ರೈನ್‌ಗಳನ್ನು ಶೋಧಿಸಬಹುದು. ಲಭ್ಯ ಇರುವ ಟ್ರೈನ್‌ಗೆ ಟಿಕೆಟ್ ಬುಕ್ ಮಾಡಬಹುದು, ಇಲ್ಲವ ಕನ್ಫರ್ಮ್ ಆಗಿರುವ ಟಿಕೆಟ್‌ಗಳನ್ನು ರದ್ದು ಮಾಡಬಹುದು. ಗೂಗಲ್ ಪೇ ಆ್ಯಪ್ ಈ ಹೊಸ ಸೇವೆಯಿಂದ ಅದು ಭಾರತೀಯ ಬಳಕೆದಾರರಿಗೆ ಮತ್ತಷ್ಟು ಹತ್ತಿರವಾಗುತ್ತಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಹಾಗಾದರೆ, ಗೂಗಲ್ ಪೇ ಆ್ಯಪ್‌ನಲ್ಲಿ ರೈಲು ಟಿಕೆಟ್ ಬುಕ್ ಹೇಗೆ ಮಾಡಬಹುದು ನೋಡೋಣ ಬನ್ನಿ. ಗೂಗಲ್ ಪೇ ಆ್ಯಪ್ ಮೂಲಕ ಟಿಕೆಟ್ ಬುಕ್ ಮಾಡಲಿಚ್ಛಿಸುವ ಬಳಕೆದಾರರು ಗಮನಿಸಬೇಕಾದ ಪ್ರಮುಖ ಸಂಗತಿ ಎಂದರೆ, ಅವರು ಐಆರ್‌ಸಿಟಿಸಿ ವೆಬ್‌ಸೈಟ್‌ನಲ್ಲಿ ಖಾತೆ ಹೊಂದಿರಲೇಬೇಕು.

## ಟಿಕೆಟ್ ಬುಕ್ ಹೀಗೆ ಮಾಡಿ

1 ಸ್ಮಾರ್ಟ್‌ಫೋನ್‌ನಲ್ಲಿರುವ ಗೂಗಲ್ ಪೇ ಆ್ಯಪ್ ಓಪನ್ ಮಾಡಿ. ಆ್ಯಪ್‌ನ ಬಿಸಿನೆಸ್‌ನ ಸೆಕ್ಷನ್‌ನಲ್ಲಿರುವ ಟ್ರೈನ್ಸ್ ಆಯ್ಕೆ ಮೇಲೆ ಟ್ಯಾಪ್ ಮಾಡಿ.

2 ಈಗ 'ಬುಕ್ ಎ ಟ್ರೈನ್ ಟಿಕೆಟ್'(ರೈಲು ಟಿಕೆಟ್ ಮುಂಗಡ ಕಾಯ್ದಿರಿಸಿ) ಆಯ್ಕೆ ಮೇಲೆ ಟ್ಯಾಪ್ ಮಾಡಿ.

3 ಈ ಎಲ್ಲ ಬಳಕೆದಾರರು ತಾವು ಎಲ್ಲಿಂದ ಪ್ರಯಾಣ ಆರಂಭಿಸುತ್ತಿದ್ದೀರಿ, ಎಲ್ಲಿಗೆ ಹೋಗಬೇಕು ಮತ್ತು ಪ್ರಯಾಣದ ದಿನಾಂಕ ಸೇರಿದಂತೆ ಇತ್ಯಾದಿ ಮಾಹಿತಿಯನ್ನು ನಮೂದಿಸಬೇಕು.

4 ಈಗ 'ಸರ್ಚ್' ಬಟನ್ ಮೇಲೆ ಕ್ಲಿಕ್ ಮಾಡಿ. ಆಗ ಲಭ್ಯ ಇರುವ ರೈಲುಗಳ ಮಾಹಿತಿಯನ್ನು ಆ್ಯಪ್ ಶೋಧಿಸುತ್ತದೆ.

5 ಆಗ ಕಾಣಿಸಿಕೊಳ್ಳುವ ರೈಲುಗಳ ಪಟ್ಟಿಯಲ್ಲಿ ನಿಮಗೆ ಬೇಕಿರುವ ರೈಲು ಲಭ್ಯತೆಯನ್ನು ಪರೀಕ್ಷಿಸಿ. ಲಿಸ್ಟ್‌ನಲ್ಲಿರುವ ಚೆಕ್ ಅವಿಲೇಬಿಲಿಟಿ ಆಪ್ಷನ್ ಮೇಲೆ ಟ್ಯಾಪ್ ಮಾಡಿ.

6 ಲಭ್ಯ ಇರುವ ಕ್ಲಾಸ್ ಹುಡುಕಿ ಮತ್ತು ಕ್ಲಾಸ್ ಎದುರಿಗೆ ಇರುವ ಸೆಲೆಕ್ಟ್ ಬಟನ್ ಮೇಲೆ ಟ್ಯಾಪ್ ಮಾಡಿ.

7 ಈಗ, ಈ ಮೇಲೆ ಹೇಳಿದಂತೆ ಬಳಕೆದಾರರು ತಮ್ಮ ಐಆರ್‌ಸಿಟಿಸಿ ಮತ್ತು ಯುಸರ್ ಐಡಿಯನ್ನು ನಮೂದಿಸಬೇಕಾಗುತ್ತದೆ. ಹಾಗೆಯೇ, ಪ್ರಯಾಣಿಕರ ಹೆಸರು, ವಯಸ್ಸು, ರಾಷ್ಟ್ರೀಯತೆ ಸೇರಿದಂತೆ ಪ್ರಯಾಣಿಕರ ಇತರ ಮಾಹಿತಿಯನ್ನು ದಾಖಲಿಸಬೇಕು.




8 ಆ್ಯಡ್ ಪ್ಯಾಸೆಂಜರ್ ಟ್ಯಾಪ್ ಮಾಡವ ಮೂಲಕ ಪ್ರಯಾಣಿಕರ ಸಂಖ್ಯೆಯನ್ನು ವೃದ್ಧಿಸಬಹುದಾಗಿದೆ.

9 ಈಗ, ನಿಮ್ಮ ಸಂಪರ್ಕ ಸಂಖ್ಯೆಯನ್ನು ದಾಖಲಿಸಿ ಮತ್ತು ಕಂಟಿನ್ಯೂ ಬಟನ್ ಮೇಲೆ ಒತ್ತಿ. ಈ ಬಟನ್ ಸ್ಕ್ರೀನ್ ತಳಭಾಗದಲ್ಲಿರುತ್ತದೆ.




10 ನೀವು ದಾಖಲಿಸಿರುವ ಎಲ್ಲ ಮಾಹಿತಿಯ ಸರಿಯಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ. ಬಳಿಕ ಲಿಂಕ್ಡ್ ಆಗಿರುವ ಬ್ಯಾಂಕ್ ಖಾತೆಗಳ ಮೂಲಕ ಪೇಮೆಂಟ್ ಮಾಡಲು ಕಂಟಿನ್ಯೂ ಬಟನ್ ಮೇಲೆ ಟ್ಯಾಪ್ ಮಾಡಿ. ಒಂದು ವೇಳೆ, ಏನಾದಾರೂ ಬದಲಾವಣೆ ಮಾಡಬೇಕಿದ್ದರೆ ಅಥವಾ ತಪ್ಪುಗಳನ್ನು ಸರಿಪಡಿಸಬೇಕಿದ್ದರೆ ಎಡಿಟ್ ಟ್ರಿಪ್ ಬಟನ್ ಮೇಲೆ ಟ್ಯಾಪ್ ಮಾಡಿ. ಅದು ಮಾಹಿತಿ ಸರಿಪಡಿಸಿಕೊಳ್ಳಲು ಅವಕಾಶ ಕಲ್ಪಿಸುತ್ತದೆ.

11 ಪೇಮೆಂಟ್ ಮಾಡುವಾಗ ಆ್ಯಪ್ ನಿಮ್ಮನ್ನು ಐಆರ್‌ಸಿಟಿ ವೆಬ್‌ಸೈಟ್‌ಗೆ ರಿಡೈರೆಕ್ಟ್ ಮಾಡುತ್ತದೆ. ಆಗ ಬಳಕೆದಾರರು ಐಆರ್‌ಸಿಟಿಸಿ ಪಾಸ್ವರ್ಡ್ ಮತ್ತು ಕ್ಯಾಪ್ಚಾ (CAPTCHA) ನಮೂದಿಸಬೇಕು. ಬಳಿಕ ಬುಕಿಂಗ್ ದೃಢೀಕರಣಕ್ಕಾಗಿ ಸಬ್‌ಮಿಟ್ ಬಟನ್ ಮೇಲೆ ಟ್ಯಾಪ್ ಮಾಡಬೇಕು.

12 ಆಗ ಬಳಕೆದಾರರು ಡೌನ್‌ಲೋಡ್ ಟಿಕೆಟ್ ಆಪ್ಷನ್ ಮೇಲೆ ಕ್ಲಿಕ್ ಮಾಡಿ, ಟಿಕೆಟ್ ಪಡೆದುಕೊಳ್ಳಬಹುದು.

Google Pay online site has introduced Railway ticket booking option in its new system which was recently came in action in Smartphone's. Google Pay is taken new and easy steps for booking online railway tickets for users.

Scanned by CamScanner